## 2018 ಕ.ತೀ.ವ 1539

### (ಧಾರವಾಡ ಪೀಠ)

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

### ಶಿವಪ್ಪ -ವಿರುದ್ಧ- ಕರ್ನಾಟಕ ರಾಜ್ಯ, (ಕಾರ್ಯದರ್ಶಿಯವರಿಂದ ಪ್ರತಿನಿಧಿತ, ಗೃಹ ಇಲಾಖೆ ಮತ್ತು ಇತರರು*

ಭಾರತ ಸಂವಿಧಾನದ ಅನುಚ್ಛೇದ 226 ಹಾಗೂ 227ರಡಿ ಸಲ್ಲಿಸಲಾದ ರಿಟ್ ಅರ್ಜಿ.

ಅರ್ಜಿದಾರರಿಗೆ ಮತ್ತು ಅವರ ಸ್ವತ್ತಿಗೆ ಪೋಲೀಸ್ ರಕ್ಷಣೆ ಒದಗಿಸಲು, 2ನೇ ಮತ್ತು 3ನೇ ಪ್ರತ್ಯರ್ಜಿದಾರರಿಗೆ ನಿರ್ದೇಶಿಸಲು ಕೋರಿ ಮ್ಯಾಂಡಮಸ್ ರೀತಿಯ ರಿಟ್ ಅರ್ಜಿ ಸಿವಿಲ್ ಡಿಕ್ರಿ – ಅಂತಿಮತೆ – ವಿಫಲಗೊಳಿಸಲು ಪ್ರಯತ್ನ – ದೂರಿನಲ್ಲಿ ಮಾಡಲಾದ ಆಪಾದನೆಗಳ ಆಧಾರದ ಮೇಲೆ ಕಾನೂನು ಕಾರ್ಯಾರಂಭ – ಅನುಬಂಧ ಜೆ1 ರಲ್ಲಿರುವಂತೆ ಎಫ್ಐಆರ್ ದಾಖಲು ಅಸಾಧಾರಣ ಸಂದರ್ಭಗಳನ್ನು ಉಂಟು ಮಾಡಿದ ಹೊರತು ಪೋಲೀಸರ ಸಹಾಯದಿಂದ ನ್ಯಾಯಿಕ ಆದೇಶ ಕಾರ್ಯಗತವಾಗತಕ್ಕದ್ದಲ್ಲ – ರಿಟ್ ಅರ್ಜಿ ತಂತಾನೇ ನಿರರ್ಥಕವಾದ ವಾದ ಕಾಲೀನ ಅರ್ಜಿ ಪರಿಗಣನೆಗೆ ಉಳಿಯುವುದಿಲ್ಲ. ರಿಟ್ ಅರ್ಜಿಯ ಜತೆಗೆ ವಾದಕಾಲೀನ ಅರ್ಜಿಯನ್ನು ಸಹ ವಜಾ ಮಾಡಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾದಲ್ಲಿ*

*1. (2006) 4 ಎಸ್‌ಸಿಸಿ 54*
*ಪಿ.ಆರ್. ಮುರಳೀಧರನ್ ಮತ್ತು ಇತರರು –ವಿರುದ್ಧ– ಸ್ವಾಮಿ ಧರ್ಮಾನಂದ ತೀರ್ಥ ಪಾದ ಮತ್ತು ಇತರರು* *(ಉಲ್ಲೇ) 3*

*ರಿಟ್ ಅರ್ಜಿ ಸಂಖ್ಯೆ: 105492/2016 (ಜಿ.ಎಂ.–ಪೋಲೀಸ್), ದಿನಾಂಕ: 18ನೇ ಆಗಸ್ಟ್, 2017.

*2. ಸಿವಿಲ್ ಅಪೀಲು 5460–5466/2004, ದಿನಾಂಕ 4–4–2007*
*ಮೋಹನ್ ಎಂ. ಬಾಸೆಲಿಯೋಸ್ ಮಾರ್ಥೋಮ*
*ಮ್ಯಾಥ್ಯೂಸ್ –ವಿರುದ್ಧ– ಕೇರಳ ರಾಜ್ಯ (ಉಲ್ಲೇ) 3*

ಅರ್ಜಿದಾರರ ಪರ: ಶ್ರೀ ಶಿವರಾಜ್ ಪಿ. ಮುಧೋಳ್, ವಕೀಲರು;
1 ರಿಂದ 3ರ ವರೆಗಿನ ಪ್ರತ್ಯರ್ಜಿದಾರರ ಪರ: ಶ್ರೀಮತಿ ಕೆ. ವಿದ್ಯಾವತಿ, ಎ.ಜಿ.ಎ.
4 ರಿಂದ 7 ರ ವರೆಗಿನ ಪ್ರತ್ಯರ್ಜಿದಾರರಿಗೆ ನೋಟೀಸು ನೀಡಲಾಗಿದೆ.

## ಆಜ್ಞೆ

**ನ್ಯಾಯಮೂರ್ತಿ ಕೆ. ಸೋಮಶೇಖರ್:**

ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರ ಹಾಗೂ 1 ರಿಂದ 3 ರ ವರೆಗಿನ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ 'ಎಜಿಎ' ರವರ ವಾದಗಳನ್ನು ಆಲಿಸಲಾಗಿದೆ.

2. ಅರ್ಜಿದಾರನು ಅನುಬಂಧ–ಇ, ಎಫ್, ಎಫ್1 ಮತ್ತು ಜಿ ಗಳ ಅನುಸಾರ, ತನಗೆ ಮತ್ತು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ, ಗಡ್ಯಾಲ ಗ್ರಾಮದಲ್ಲಿರುವ 8 ಎಕರೆ 7 ಗುಂಟೆ ವಿಸ್ತೀರ್ಣವುಳ್ಳ ಹೊಸ ಸರ್ವೆ ಸಂಖ್ಯೆ:65/2/2 (ಹಳೆಯ ಸರ್ವೆ ಸಂಖ್ಯೆ: 65/5) ಹೊಂದಿರುವ ತನ್ನ ಸ್ವತ್ತಿಗೆ ಪೊಲೀಸ್ ರಕ್ಷಣೆ ಒದಗಿಸಲು, 2ನೇ ಮತ್ತು 3ನೇ ಪ್ರತ್ಯರ್ಜಿದಾರರಿಗೆ ನಿರ್ದೇಶಿಸಿ, ಮ್ಯಾಂಡಮಸ್ ಸ್ವರೂಪದಲ್ಲಿ ಆದೇಶ ನೀಡುವಂತೆ ಕೋರಿ, ಈ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

3. ಅರ್ಜಿದಾರನ ಪರ ಮಾನ್ಯ ವಕೀಲರು ತಮ್ಮ ವಾದದ ಸಮರ್ಥನೆಯಲ್ಲಿ, ***ಪಿ.ಆರ್. ಮುರಳೀಧರನ್ ಮತ್ತು ಇತರರು -ವಿರುದ್ಧ- ಸ್ವಾಮಿ ಧರ್ಮಾನಂದ ತೀರ್ಥ ಪಾದ ಮತ್ತು ಇತರರು***[1] ಪ್ರಕರಣದಲ್ಲಿ ಹಾಗೂ ***ಮೋಹನ್ ಎಂ. ಬಾಸೆಲಿಯೋಸ್ ಮಾರ್ಥೋಮ ಮ್ಯಾಥ್ಯೂಸ್ -ವಿರುದ್ಧ- ಕೇರಳ ರಾಜ್ಯ***[2] ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪುಗಳನ್ನು ಅವಲಂಬಿಸಿದ್ದಾರೆ. ಆ ತೀರ್ಪುಗಳಲ್ಲಿ, ಪೊಲೀಸ್ ರಕ್ಷಣೆ ಒದಗಿಸಲು ಕೋರಿ ಸಲ್ಲಿಸಿದ ರಿಟ್ ಅರ್ಜಿಯು ಊರ್ಜಿತ ಯೋಗ್ಯವಾಗಿದೆ.

4. ಅನುಬಂಧ-ಜೆ ಯಲ್ಲಿರುವಂತೆ ಅರ್ಜಿದಾರನು ದಾಖಲಿಸಿದ ದೂರಿನ ಆಧಾರದ ಮೇಲೆ, ಸಾವಳಗಿ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರು ಅನುಬಂಧ ಜೆ1 ರಲ್ಲಿರುವಂತೆ ಎಫ್‌ಐಆರ್ ದಿನಾಂಕ 17.05.2016ನ್ನು ದಾಖಲಿಸಿರುತ್ತಾರೆಂದು 1 ರಿಂದ 3 ರ ವರೆಗಿನ ಪ್ರತ್ಯರ್ಜಿದಾರರ ಪರ ಮಾನ್ಯ ಎಜಿಎ ರವರು ನಿವೇದಿಸಿದ್ದಾರೆ.

5. ಇದರಲ್ಲಿನ ಅರ್ಜಿದಾರರ ಪರ ಸಿವಿಲ್ ಡಿಕ್ರಿಯನ್ನು ಮಾಡಲಾಗಿದ್ದು, ಅದು ಅಂತಿಮತೆಯನ್ನು ತಲುಪಿದೆಯೆಂದು ಅರ್ಜಿದಾರರು ವಾದಿಸಿದ್ದಾರೆ. ಅಮಲ್ಜಾರಿ ಅರ್ಜಿಯಲ್ಲಿ ಸ್ವತ್ತಿನ ಒತ್ತುವರಿಯಾಗಿದ್ದ ಭಾಗವನ್ನು ಕೋರ್ಟ್ ವಾರಂಟ್ ಸಹಾಯದಿಂದ ಮರಳಿ ಪಡೆಯಲಾಯಿತು. ಆದರೆ, ಸಿವಿಲ್ ನ್ಯಾಯಾಲಯದ ಡಿಕ್ರಿಯ ಆದೇಶವನ್ನು ವಿಫಲಗೊಳಿಸುವ ಸಲುವಾಗಿ 4 ರಿಂದ 7ರ ವರೆಗಿನ ಪ್ರತ್ಯರ್ಜಿದಾರರು ಅಕ್ರಮವಾಗಿ ಮತ್ತು ದರ್ಪದಿಂದ ದೈನಂದಿನ ಕೃಷಿ ಚಟುವಟಿಕೆಗಳಿಗೆ ಅಡ್ಡಿಯನ್ನುಂಟು ಮಾಡಲು ಪ್ರಯತ್ನಿಸುತ್ತಿದ್ದಾರೆ ಹಾಗೂ ಉಗ್ರ ಪರಿಣಾಮಗಳನ್ನು ಉಂಟುಮಾಡುವುದಾಗಿ ಬೆದರಿಸುತ್ತಿದ್ದಾರೆ. ಹಾಗಿದ್ದರೂ, ಅರ್ಜಿದಾರನಿಗೂ ಮತ್ತು ಅವನ ಸ್ವತ್ತಿಗೂ ಪೊಲೀಸ್ ರಕ್ಷಣೆಯನ್ನು ಒದಗಿಸಲು 2ನೇ ಮತ್ತು 3ನೇ ಪ್ರತ್ಯರ್ಜಿದಾರರಿಗೆ ಆಜ್ಞೆ ಮಾಡುವ ಸಲುವಾಗಿ, ಅವರಿಗೆ ನಿರ್ದೇಶಿಸಲು ಕೋರಿ,

1.(2006) 4 ಎಸ್‌ಸಿಸಿ 54

2. ಸಿವಿಲ್ ಅಪೀಲು 5460-5466/2004, ದಿನಾಂಕ 4-4-2007

ಮ್ಯಾಂಡಮಸ್ ಸ್ವರೂಪದಲ್ಲಿ ರಿಟ್ ಅರ್ಜಿ ಮೂಲಕ ಈ ನ್ಯಾಯಾಲಯಕ್ಕೆ ಬರಲು ಅರ್ಜಿದಾರನಿಗೆ ಕಾನೂನಿನ ಆಸರೆ ಯಾವಾಗಲೂ ಲಭ್ಯವಿದೆ.

6. ಅಷ್ಟೇ ಅಲ್ಲದೆ, ಪೊಲೀಸ್ ಅಧಿಕಾರಿಗಳು ಯಾವುದೇ ಪ್ರಕರಣವನ್ನು ದಾಖಲಿಸಿಲ್ಲ ಮತ್ತು ಅವನಿಗೆ ಪೊಲೀಸ್ ರಕ್ಷಣೆಯನ್ನು ಒದಗಿಸಿಲ್ಲವೆಂದು ವಾದಿಸಲಾಗಿದೆ. ಹಾಗಿದ್ದರೂ, ಅರ್ಜಿದಾರನು ದಾಖಲಿಸಿದ ದೂರಿನ ಆಧಾರದ ಮೇಲೆ ಸಾವಳಗಿ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರು ಅನುಬಂಧ–ಜೆ1 ರಲ್ಲಿರುವಂತೆ ಎಫ್ಐಆರ್ ದಾಖಲಿಸಿಕೊಂಡಿದ್ದಾರೆಂದು 1 ರಿಂದ 3 ರ ವರೆಗಿನ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ಎಜಿಎ ರವರು ನಿವೇದಿಸಿದ್ದಾರೆ. ಮೇಲೆ ಹೇಳಲಾದ ಕಾರಣಗಳ ದೃಷ್ಟಿಯಿಂದ ಮತ್ತು ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳಲ್ಲಿ, ನ್ಯಾಯಾಲಯವು, ಎಫ್ಐಆರ್ ದಾಖಲು ಮಾಡುವ ದೃಷ್ಟಿಯಿಂದ, ದೂರಿನಲ್ಲಿ ಮಾಡಲಾದ ಆಪಾದನೆಗಳ ಆಧಾರದ ಮೇಲೆ ಕಾನೂನನ್ನು ಕಾರ್ಯಾರಂಭ ಮಾಡಲಾಗಿದೆ. ಅದಕ್ಕಿಂತ ಹೆಚ್ಚಾಗಿ, ಅಸಾಧಾರಣವಾದ ಸನ್ನಿವೇಶಗಳನ್ನು ಉಂಟುಮಾಡಿದ ಹೊರತು, ಪೊಲೀಸರ ಸಹಾಯದಿಂದ ನ್ಯಾಯಿಕ ಆದೇಶವನ್ನು ಕಾರ್ಯಗತಗೊಳಿಸತಕ್ಕದ್ದಲ್ಲ. ಆದುದರಿಂದ, ರಿಟ್ ಅರ್ಜಿಯು ತಂತಾನೇ ನಿರರ್ಥಕವಾಗುತ್ತದೆ. ಇದರಿಂದಾಗಿ, ಅದು ವಜಾಗೊಳ್ಳಲು ತಕ್ಕುದಾಗಿದೆ.

ತದನುಸಾರವಾಗಿ, ರಿಟ್ ಅರ್ಜಿಯನ್ನು ವಜಾ ಮಾಡಲಾಗಿದೆ.

ರಿಟ್ ಅರ್ಜಿಯು ವಿಫಲಗೊಂಡ ಕಾರಣ, ಅದನ್ನು ವಜಾಗೊಳಿಸುವ ದೃಷ್ಟಿಯಿಂದ ನಿರ್ದೇಶಿಸಲು ಕೋರಿ ಸಲ್ಲಿಸಿದ ವಾದಕಾಲೀನ ಅರ್ಜಿಯು ಪರಿಗಣನೆಗೆ ಉಳಿಯುವುದಿಲ್ಲ. ಆದ್ದರಿಂದ ಅದನ್ನು ಸಹ ಈ ಮೂಲಕ ವಜಾ ಮಾಡಲಾಗಿದೆ.